# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2262
ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ
ಉತ್ತರಿಸಬೇಕಾದ ದಿನಾಂಕ : 26-03-2026
ಉತ್ತರಿಸಬೇಕಾದ ಸಚಿವರು : ಮುಖ್ಯ ಮಂತ್ರಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಯಾವಾಗ ಜಾರಿಗೆ ತಂದಿತು; | 7ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳ ಬೆಳಕಿನಲ್ಲಿ ರಾಜ್ಯ ಸರ್ಕಾರಿ ನೌಕರರ ವೇತನ, ವೇತನ ಸಂಬಂಧಿತ ಭತ್ಯೆ ಹಾಗೂ ಪಿಂಚಣಿಯನ್ನು ಪರಿಷ್ಕರಿಸಿ ದಿನಾಂಕ:01.08.2024ರಿಂದ ಅನ್ವಯವಾಗುವಂತೆ ಅನುಷ್ಠಾನಗೊಳಿಸಲಾಗಿರುತ್ತದೆ. |
| ಆ) | ವೇತನ ಆಯೋಗದ ಶಿಫಾರಸ್ಸುಗಳನ್ನು ಸಾಮಾಜಿಕ ವಿವಿಧ ಇಲಾಖೆಗಳಡಿ ಕಾರ್ಯ ನಿರ್ವಹಿಸುವ ನಿಗಮಗಳಾದ ದೇವರಾಜ ಅರಸು ನಿಗಮ, ಮಹರ್ಷಿ ವಾಲ್ಮೀಕಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಸಿಬ್ಬಂದಿಗಳಿಗೆ ಅನುಷ್ಠಾನಗೊಳಿಸಲಾಗುವುದೇ; | ಸಾಮಾನ್ಯವಾಗಿ ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆ ಕುರಿತಂತೆ ರಾಜ್ಯ ಸರ್ಕಾರದ ವಿತ್ತೀಯ ನೀತಿ, ಆಯ-ವ್ಯಯ ಮತ್ತು ಸಂಪನ್ಮೂಲ ಲಭ್ಯತೆ ಹಾಗೂ ಆರ್ಥಿಕ ಹೊಣೆಗಾರಿಕೆಗಳನ್ನು ಗಮನದಲ್ಲಿರಿಸಿ ಸೂಕ್ತ ಅಧ್ಯಯನ ಮಾಡಿ ಕಾರ್ಯಸಾಧ್ಯವಿರುವ ವರದಿಯನ್ನು ಸಲ್ಲಿಸಲು ಕಾಲ ಕಾಲಕ್ಕೆ ರಾಜ್ಯ ವೇತನ ಆಯೋಗಗಳಂತಹ ತಜ್ಞ ಸಮಿತಿಗಳನ್ನು ರಚಿಸಲಾಗುತ್ತದೆ.<br>ಸರ್ಕಾರದ ವಿವಿಧ ಉದ್ದಿಮೆ, ನಿಗಮ, ಮಂಡಳಿಗಳು ಮತ್ತು ಸ್ವಾಯತ್ತ ಸಂಸ್ಥೆಗಳ ನೌಕರರನ್ನು ರಾಜ್ಯ ಸರ್ಕಾರಿ ನೌಕರರೆಂದು ಪರಿಗಣಿಸಲಾಗುವುದಿಲ್ಲವಾದ್ದರಿಂದ, ರಾಜ್ಯ ವೇತನ ಆಯೋಗದ ಪರಿಶೀಲನಾರ್ಹ ಅಂಶಗಳಲ್ಲಿ ಅವುಗಳನ್ನು ಸೇರ್ಪಡೆ ಮಾಡುವುದಿಲ್ಲ. ಆದಕಾರಣ ವೇತನ ಆಯೋಗದ ಶಿಫಾರಸ್ಸುಗಳು ಸರ್ಕಾರದ ವಿವಿಧ ನಿಗಮ, ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ.<br>ಸರ್ಕಾರದ ವಿವಿಧ ಉದ್ದಿಮೆಗಳು, ನಿಗಮ, ಮಂಡಳಿಗಳು, ಸ್ವಾಯತ್ತ ಸಂಸ್ಥೆಗಳು, ಅವುಗಳ ಆರ್ಥಿಕ ಸಬಲತೆಯನ್ನು ಆಧರಿಸಿ ಸರ್ಕಾರವು ನಿಗದಿಪಡಿಸಿರುವ ಮಾನದಂಡ ಮತ್ತು ಕಾರ್ಯವಿಧಾನವನ್ನು ಅನುಸರಿಸಿ ತಮ್ಮ ನೌಕರರ ವೇತನ ಪರಿಷ್ಕರಣೆಯನ್ನು ನಿಯಮಾನುಸಾರ ಮಾಡಲು ಅವಕಾಶವಿರುತ್ತದೆ. ಅದರಂತೆ, ಸರ್ಕಾರದ ಅಧೀನಕ್ಕೊಳಪಡುವ ದೇವರಾಜ ಅರಸು ನಿಗಮ, ಮಹರ್ಷಿ ವಾಲ್ಮೀಕಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ಇತ್ಯಾದಿ ನಿಗಮಗಳು ಅವುಗಳ ಆರ್ಥಿಕ ಸಬಲತೆ ಮತ್ತು ಇತರೆ ಅಂಶಗಳನ್ನು ಆಧರಿಸಿ ನಿಯಮಾನುಸಾರ ನೌಕರರ ವೇತನ ಪರಿಷ್ಕರಣೆಯ ಬಗ್ಗೆ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳಬಹುದಾಗಿರುತ್ತದೆ.<br>ಮುಂದುವರೆದು, 7ನೇ ರಾಜ್ಯ ವೇತನ ಆಯೋಗದ ಅಂತಿಮ ಶಿಫಾರಸ್ಸುಗಳನ್ನು ಕಾಯ್ದಿರಿಸಿ ರಾಜ್ಯ ಸರ್ಕಾರಿ ನೌಕರರಿಗೆ 2018ರ ಪರಿಷ್ಕೃತ ವೇತನ ಶ್ರೇಣಿಯ ಮೂಲ ವೇತನದ 17%ರಷ್ಟು ಮಧ್ಯಂತರ ಪರಿಹಾರವನ್ನು ದಿನಾಂಕ: 01.04.2023ರಿಂದ ಅನ್ವಯಿಸುವಂತೆ ಮಂಜೂರು ಮಾಡಲಾಗಿದ್ದು, ಈ ಸೌಲಭ್ಯವು ರಾಜ್ಯ ಸರ್ಕಾರಿ ನೌಕರರಿಗೆ 2024ರ ಪರಿಷ್ಕೃತ ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸಿದ ದಿನಾಂಕ:01.08.2024ರಿಂದ ಲಭ್ಯವಿರುವುದಿಲ್ಲ.<br>ಈ ಮೇಲೆ ತಿಳಿಸಿದಂತೆ, ಸರ್ಕಾರದ ವಿವಿಧ ಉದ್ದಿಮೆಗಳು, ನಿಗಮ, ಮಂಡಳಿ ಇತ್ಯಾದಿ ಸಂಸ್ಥೆಗಳು, ಅವುಗಳ ಆರ್ಥಿಕ ಸಬಲತೆ (ability to pay)ಯನ್ನು ಗಮನದಲ್ಲಿರಿಸಿ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸಿ ತಮ್ಮ ನೌಕರರ ವೇತನ ಪರಿಷ್ಕರಣೆ ಕುರಿತಂತೆ ನಿಯಮಾನುಸಾರ ಕ್ರಮವಹಿಸಲು ಅವಕಾಶವಿರುತ್ತದೆ. |
| ಇ) | ಹಿಂದಿನ ಸರ್ಕಾರ ನೀಡಿರುವ ಮಧ್ಯಂತರ ಪರಿಹಾರ 17% ನೀಡಲಾಗಿದ್ದು, ಪ್ರಸ್ತುತ 7ನೇ ವೇತನ ಆಯೋಗದ ಬಾಕಿ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಹಣಕಾಸು ಇಲಾಖೆ ಯಾವ ಉದ್ದೇಶಕ್ಕೆ ತಡೆಯುತ್ತಿದೆ; | |
| ಈ) | ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳನುಸಾರ ನೇಮಕಗೊಂಡು ಈ ಹಿಂದೆ 6ನೇ ವೇತನ ಆಯೋಗದಂತೆ ಸೌಲಭ್ಯ ನೀಡಿ ಈಗ ವಿವಿಧ ಕಾರಣ ನೀಡುತ್ತಿರುವುದೇಕೆ; ಸರ್ಕಾರದಲ್ಲಿ ಅನುದಾನದ ಕೊರತೆ ಇದೆಯೇ; | |
| ಉ) | ಸದರಿ ನೌಕರರಿಗೆ ಯಾವಾಗ 7ನೇ ವೇತನ ಆಯೋಗದ ಸೌಲಭ್ಯಗಳನ್ನು ಒದಗಿಸಲಾಗುವುದು? (ಸ್ಪಷ್ಟವಾದ ಕಾಲಾವಧಿಯನ್ನು ಒದಗಿಸುವುದು); | |

**ಸಂಖ್ಯೆ: ಆಇ 02 ಎಸ್‌ಆರ್‌ಪಿ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ